

# ಅದಿತಿಯ ಹೊಸ ಭರವಸೆ

ಅದಿತಿ ರಾವ್ ಹೈದರಿ ಬಾಲಿವುಡ್‌ನಲ್ಲಿ ಕೈತುಂಬ ಕೆಲಸ ಇಲ್ಲದಿದ್ದರೂ ಸದಾ ಸುದ್ದಿಯಲ್ಲಿರುವ ತಾರೆ. ಈಗ ಮಣಿರತ್ನಂ ಅವರ ತಮಿಳು ಚಿತ್ರದಲ್ಲಿ ಪ್ರಮುಖ ಪಾತ್ರವೊಂದು ಸಿಕ್ಕಿದ ಹಿನ್ನೆಲೆಯಲ್ಲಿ ಫುಲ್‌ಖುಷ್ ಆಗಿದ್ದಾರೆ. ಕಳೆದ ವರ್ಷ ಅದಿತಿ, ಮಣಿರತ್ನಂ ಅವರ 'ಕಾಟ್ರು ವೆಳಿಯಿದೈ' ಚಿತ್ರದಲ್ಲೂ ಕಾರ್ತಿ ಜತೆ ಪ್ರಮುಖ ಪಾತ್ರದಲ್ಲಿ ನಟಿಸಿದ್ದರು. ಕಾರ್ಗಿಲ್ ಯುದ್ಧದ ಹಿನ್ನೆಲಯ ಕಥೆಯಿದ್ದ ಆ ಚಿತ್ರ ಬಾಕ್ಸಾಫೀಸ್‌ನಲ್ಲಿ ದಯನೀಯ ಸೋಲು ಕಂಡಿತ್ತು. ಆದರೆ ಚಿತ್ರದಲ್ಲಿ ಈಕೆ ನಿರ್ವಹಿಸಿದ ಪಾತ್ರದ ಬಗ್ಗೆ ಸಾಕಷ್ಟು ಮೆಚ್ಚುಗೆ ವ್ಯಕ್ತವಾಗಿತ್ತು. ಆ ಹಿನ್ನೆಲೆಯಲ್ಲೇ ಮಣಿ ಮತ್ತೆ ಅದಿತಿಯ ಆಯ್ಕೆ ನಡೆಸಿದ್ದಾರೆ ಎನ್ನಲಾಗಿದೆ.

ಅದಿತಿ ಈ ವರ್ಷದ ಆರಂಭದಲ್ಲಿ ತೆರೆಕಂಡು ಈಗಲೂ ಭರ್ಜರಿ ಕಲೆಕ್ಷನ್ ನಡೆಸಿರುವ 'ಪದ್ಮಾವತ್' ಚಿತ್ರದಲ್ಲೂ ಪ್ರಮುಖ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾಳೆ. ಅಲ್ಲಾವುದ್ದೀನ್ ಖಿಲ್ಜಿಯ ರಾಣಿ ಮೆಹ್ರುನ್ನಿಸಾ ಪಾತ್ರ ಆಕೆಗೆ ಖ್ಯಾತಿ ತಂದುಕೊಟ್ಟಿದೆ.



# ಮಣಿರತ್ನಂ ಹೊಸ ಸಾಹಸ

ಮಣಿರತ್ನಂ ಹೊಸ ಸಿನಿಮಾ ಬಂದೇ ಬರುತ್ತೆ ಎನ್ನುವ ಸುದ್ದಿ ಕಳೆದ ಆರು ತಿಂಗಳಿಂದಲೂ ಇದೆ. ಕೊನೆಗೂ ಈಗ ಮಣಿ ಹೊಸ ತಮಿಳು ಚಿತ್ರದ ಪೋಸ್ಟರ್ ಬಿಡುಗಡೆಯಾಗಿದೆ. ಮದ್ರಾಸ್ ಟಾಕೀಸ್ ಬ್ಯಾನರ್‌ನ 19ನೇ ಚಿತ್ರವಿದು. 'ಚೆಕ್ಕ ಚಿವಂತ ವಾನಂ' ಎನ್ನುವುದು ಚಿತ್ರದ ಟೈಟಲ್. ಅಂದರೆ 'ಗಾಢ ಕೆಂಪು ಆಕಾಶ' ಎಂದರ್ಥ. ತಾರಾಗಣ ನೋಡಿದರೆ ಮಣಿರತ್ನಂ ಚಿತ್ರಜೀವನದಲ್ಲೇ ಇದು ಅತಿದೊಡ್ಡ ಸಿನಿಮಾ ಎನ್ನಿಸುವಂತಿದೆ. ವಿಜಯ್ ಸೇತುಪತಿ, ಅರವಿಂದ ಸ್ವಾಮಿ, ಸಿಳಂಬರಸನ್, ಜ್ಯೋತಿಕಾ, ಐಶ್ವರ್ಯ ರಾಜೇಶ್, 'ಅಂಗಮಾಲಿ ಡೈರೀಸ್' ಖ್ಯಾತಿಯ ಶರತ್, ಡಯಾನಾ, ಬಾಲಿವುಡ್‌ನ ಆದಿತಿ ರಾವ್ ಹೈದರಿ, ಪ್ರಕಾಶ್‌ರಾಜ್, ತ್ಯಾಗರಾಜನ್, ಮನ್ಸೂರ್ ಅಲಿ ಖಾನ್, ಅರುಣ್ ವಿಜಯ್, ಜಯಸುಧಾ– ಹೀಗೆ ಅತಿರಥ ಮಹಾರಥರೆಲ್ಲ ಈ ಚಿತ್ರದಲ್ಲಿದ್ದಾರೆ!

ಎ.ಆರ್.ರೆಹಮಾನ್ ಸಂಗೀತ ನಿರ್ದೇಶನ ಮತ್ತು ಸಂತೋಷ್ ಶಿವನ್ ಕ್ಯಾಮೆರಾ ಚಿತ್ರದ ಹೈಲೈಟ್ ಅಂತೆ. ಸಂತೋಷ್ ಶಿವನ್ ಸದ್ಯಕ್ಕೆ ಮಣಿಯವರ ಅಚ್ಚುಮೆಚ್ಚಿನ ಕ್ಯಾಮೆರಾಮನ್ ಆದಂತಿದೆ. ಇದು ಇಬ್ಬರೂ ಜತೆಗೂಡಿ ಕೆಲಸ ಮಾಡುತ್ತಿರುವ ಆರನೇ ಚಿತ್ರ.

ಮಣಿರತ್ನಂ ಸಹನಿರ್ಮಾಪಕರೂ ಆಗಿದ್ದು ಚಿತ್ರಕಥೆಯನ್ನೂ ಬರೆದಿದ್ದಾರೆ. ಚಿತ್ರ ತೆಲುಗಿನಲ್ಲಿ 'ನವಾಬ್' ಎನ್ನುವ ಹೆಸರಿನಲ್ಲಿ ಏಕಕಾಲಕ್ಕೆ ಚಿತ್ರೀಕರಣವಾಗಲಿದೆ ಎನ್ನುವ ಸುದ್ದಿಯೂ ಇದೆ.

■ ಬಿಂದು

Printed and Published by B.A. Ravi on behalf of The Printers (Mysore) Private Ltd. Printed at M/s Geetanjali Graphics, # B-71, New No. 84, KSSIDC, Indl Estate, 6th Block, Rajajinagar, Bengaluru- 560010 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65